ನಾರಾಯಣಪುರ ಅಣೆಕಟ್ಟೆಯ ದುರಸ್ತಿ ಬಗ್ಗೆ

4685 (5411) : ಶ್ರೀ ರಾಜಾ ವೆಂಕಟಪ್ಪ ನಾಯಕ (ಶೋರಾಪುರ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾರಾಯಣಪುರ ಅಣೇಕಟ್ಟೆಯ ದುರಸ್ತಿಗಾಗಿ ಪ್ರತಿವರ್ಷ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರವು ಇದಕ್ಕೆ ಯಾವಾಗ ಖಾಯಂ ಪರಿಹಾರವಾಗಿ ಕ್ರಮವನ್ನು ಕೈಗೊಳ್ಳುವುದು?

ಶ್ರೀ ಹೆಚ್. ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ನಾರಾಯಣಪುರ ಅಣೆಕಟ್ಟನ್ನು ಪೂರ್ಣಗೊಳಿಸಿ ಜಲಾಶಯದಲ್ಲಿ 1982ರಿಂದಲೇ ನೀರನ್ನು ಸಂಗ್ರಹಿಸಲಾಗುತ್ತಿದೆ. ನಾರಾಯಣಪುರ ಅಣೆಕಟ್ಟನ್ನು ಸುಸ್ಥಿತಿಯಲ್ಲಿಡುವುದು ಅವಶ್ಯಕ ಇದ್ದು, ಅದರಂತೆ ಅಗತ್ಯಕ್ಕೆ ಅನುಗುಣವಾಗಿ ವಾರ್ಷಿಕ ನಿರ್ವಹಣೆ ಹಾಗೂ ನಿಯತಕಾಲಿಕ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಬ್ಯಾಕ್‌ಲಾಗ್ ನೀತಿಗೆ ವಿರುದ್ಧವಾಗಿ ವರ್ತಿಸುತ್ತಿರುವುದು

4686 (5415) : ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ, ಇವರು ಸರ್ಕಾರದ "ಬ್ಯಾಕ್‌ಲಾಗ್" ನೀತಿಗೆ ವಿರುದ್ಧವಾಗಿ ವರ್ತಿಸುತ್ತಾ ಇದ್ದು, ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಚಿತ್ರದುರ್ಗ ಡಿಸ್ಟ್ರಿಕ್ಟ್ ಮಜ್ದೂರ್ ಸಂಘ (ರಿ). ದಾವಣಗೆರೆ, ಇವರು ಮನವಿ ಸಲ್ಲಿಸಿರುವುದು ನಿಜವೇ;

ಆ) ಹೌದಾದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಮತ್ತು ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಹೌದು.

ಆ) ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆ (ನಿ), ದೊಡ್ಡಬಾತಿ ಇದರಲ್ಲಿ 16 ಪರಿಶಿಷ್ಟ ಜಾತಿ, ಬ್ಯಾಕ್‌ಲಾಗ್ ಹುದ್ದೆಗಳಿಗೆ ಕಾರ್ಖಾನೆಯು ನೇಮಕಾತಿ ಮಾಡಿಕೊಂಡು ದಿನಾಂಕ 21.6.2003ರಲ್ಲಿ ನೇಮಕಾತಿ ಆದೇಶ ಹೊರಡಿಸಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಸರಿದೂಗಿಸಿಕೊಂಡಿರುತ್ತದೆ.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯ ಒಪ್ಪಂದ

4687 (5427) : ಶ್ರೀ ರವೀಂದ್ರನಾಥ್ ಎಸ್.ಎ (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ, ಇದರ ಮೇಲೆ ಸರ್ಕಾರಕ್ಕೆ ಇರುವ ಅಧಿಕಾರದ ಬಗ್ಗೆ ಘನ ರಾಜ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ ರಿ.ಪೆ.ಸಂಖ್ಯೆ. 13524/99 ರಲ್ಲಿ ದಿನಾಂಕ 25.2.2003ರಂದು ಕೊಟ್ಟಿರುವ ತೀರ್ಪಿನಲ್ಲಿ ಹೇಳಿರುವುದೇನು;